30-40 ವರ್ಷಗಳಿಂದ ದೇವಸ್ಥಾನ ಹಾಗೂ ಮನೆಗಳನ್ನು ಕಟ್ಟಿಕೊಂಡು ಜೀವನ ನಡೆಸುವವರಿಗೆ ಇದು ಬೋರ್ಡಿಗೆ ಸಂಬಂಧಪಟ್ಟ ಜಾಗ, ಇಲ್ಲಿ ವಾಸ ಮಾಡಬಾರದು ಎಂದು ಬುಲ್‌ಡೋಜರ್‌ದಿಂದ ಬಡ ಜನರ ಗುಡಿಸಲುಗಳನ್ನು ಹಾಗೂ ಮನೆಗಳನ್ನು ನೆಲಸಮ ಮಾಡಿದ್ದಾರೆ. ಹಾಗೂ ಅಲ್ಲಿಯ ರೈತರು ಬೆಳೆದಂಥ ಕಬ್ಬು, ಭತ್ತ ಬಾಳೆ ವಾಣಿಜ್ಯ ಬೆಳೆಗಳನ್ನು ಮಾರ್ಕೆಟ್‌ಗೆ ಹಾಗೂ ಕಾರ್ಖಾನೆಗೆ ಕೊಂಡುಹೋಗಲು ಇರುವ ದಾರಿಯನ್ನೂ ಸಹ ಬಂದ್ ಮಾಡಿದ್ದಾರೆ. ಅಲ್ಲದೆ ಎಲ್‌ಎನ್‌ಸಿ ಕಾಲುವೆ ಪಕ್ಕದಲ್ಲಿ ಸಣ್ಣ ರೈತರು ಸುಮಾರು ವರ್ಷಗಳಿಂದ ಭೂಮಿಯನ್ನು ಸಾಗುವಳಿ ಮಾಡುತ್ತಿದ್ದಾರೆ. ಅವರು ಅಲ್ಲಿ ಕಬ್ಬು, ಬತ್ತ, ಬಾಳೆ ಬೆಳೆಗಳನ್ನು ಬೆಳೆದು ತಮ್ಮ ಜೀವನವನ್ನು ಸಾಗಿಸುತ್ತಿದ್ದಾರೆ. ಆ ರೈತರಿಗೆ ಭೂಮಿಯನ್ನು ಖಾಲಿ ಮಾಡಬೇಕೆಂದು ತಿಳಿಸುತ್ತಿದ್ದಾರೆ. ಇದರಿಂದ ಅಲ್ಲಿನ ರೈತರಿಗೆ ತೊಂದರೆಯಾಗಿದೆ. ಇದನ್ನು ತಡೆಗಟ್ಟಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಂ.ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು) : ಈ ತುಂಗಭದ್ರಾ ಬೋರ್ಡ್ ಬಿಳಿ ಆನೆ ಎಂದು ಹೇಳಿ ಬಹಳ ವರ್ಷಗಳಿಂದ ನಮ್ಮ ಸರ್ಕಾರ ಅದರ ಬಗ್ಗೆ ಪ್ರಯತ್ನ ಮಾಡುತ್ತಲೇ ಇದೆ. ಇದರ ಬಗ್ಗೆ ಎ.ಜಿ. ರಾಮಚಂದ್ರರಾಯರ ರಿಪೋರ್ಟ್ ಕೂಡ ಇದೆ. ಕೇಂದ್ರ ಸರ್ಕಾರ ಈ ಹಿಂದೆ ಮಾಡಿದಂಥ ಪ್ರಕ್ರಿಯೆಯಲ್ಲಿ ಅಂತರ್‌ರಾಜ್ಯಕ್ಕೆ ಸಂಬಂಧಪಟ್ಟಂಥ ಆಂಧ್ರಪ್ರದೇಶ್ ಮತ್ತು ಮದ್ರಾಸ್ ಪ್ರಾಂತ್ಯಗಳು ಈ ಸಂಬಂಧದಲ್ಲಿತ್ತು. ಆದರೆ ಅದನ್ನು ರದ್ದು ಮಾಡಬೇಕೆಂಬ ಪ್ರಸ್ತಾವನೆ ಕೇಂದ್ರ ಸರ್ಕಾರದಲ್ಲಿದೆ. ಆದರೆ ಇನ್ನೂ ಅದರ ಬಗ್ಗೆ ಸೂಕ್ತ ನಿರ್ಧಾರವನ್ನು ತೆಗೆದುಕೊಂಡಿಲ್ಲ. ಆದರೆ ಈಗ ಕಾಲುವೆಗಳ ಇಕ್ಕೆಲಗಳಲ್ಲಿ ತೋಟಗಳನ್ನು ಮಾಡಿಕೊಂಡಿರತಕ್ಕಂಥ ಸಂದರ್ಭ ಇದ್ದರೆ ಅಂದರೆ ಅದನ್ನು ಕಾಲುವೆಯಿಂದ ಸುಮಾರು ಅರ್ಧ ಕಿ.ಮೀ.ವರೆಗೆ ತೆಗೆದುಕೊಂಡಿರುತ್ತಾರೆ ಈ ಭೂ ಸ್ವಾಧೀನ ಕ್ರಮದ ಪ್ರಕಾರ. ಅದನ್ನು ಮಾನವೀಯ ದೃಷ್ಟಿಯಿಂದ ನೋಡಬೇಕೆಂದು ತಮ್ಮ ದೃಷ್ಟಿಯಲ್ಲಿದೆ. ಅದರ ಬಗ್ಗೆ ಬೋರ್ಡ್‌ನಲ್ಲಿ ಪ್ರಸ್ತಾಪ ಮಾಡುವುದಕ್ಕೆ ನಾವು ಪ್ರಯತ್ನ ಮಾಡುತ್ತೇವೆ. ತಮಗೆಲ್ಲಾ ಗೊತ್ತಿರುವಂತೆ ಆ ತುಂಗಭದ್ರಾ ಗೋಡೆಯ ವ್ಯಾಪ್ತಿಯಲ್ಲಿ ಆ ಇಡೀ ಪ್ರದೇಶ ಬುರುವುದರಿಂದ ಅಲ್ಲಿರುವಂಥ ಅನೇಕ ಜನರು ಬಹಳ ವರ್ಷಗಳಿಂದ ಏನಿದ್ದಾರೆ ಅವರ ಬಗ್ಗೆಯೂ ಕೂಡ ಬೋರ್ಡ್‌ನಲ್ಲಿ ಚರ್ಚೆ ಮಾಡಲಾಗುವುದು. ಆ ಬೋರ್ಡ್‌ನಲ್ಲಿ ನಮ್ಮ ಅಧಿಕಾರಿಗಳೂ ಇರುತ್ತಾರೆ, ಇದರಲ್ಲಿ ಚೀಫ್ ಇಂಜಿನಿಯರ್‌ರವರೂ ಕೂಡ ಸದಸ್ಯರಾಗಿರುತ್ತಾರೆ. ಇವರಿಗೂ ಕೂಡ ಇದರ ಬಗ್ಗೆ ಈ ಮಾಹಿತಿಯನ್ನು ಕಲುಹಿಸಿಕೊಟ್ಟು ಮಾನವೀಯತೆಯ ದೃಷ್ಟಿಯಿಂದ ಈ ಸಮಸ್ಯೆಯನ್ನು ಬಗೆಹರಿಸಲಿಕ್ಕೆ ಬೋರ್ಡ್‌ನಲ್ಲಿ ಪ್ರಸ್ತಾಪ ಮಾಡುತ್ತೇವೆ.

ಪದವಿ ಪೂರ್ವ ವೃತ್ತಿ ಶಿಕ್ಷಣ ಅಧ್ಯಾಪಕರು ಹಾಗೂ ಅಧ್ಯಾಪಕರುಗಳನ್ನು ಖಾಯಂಗೊಳಿಸುವ ಬಗ್ಗೆ

ಶ್ರೀ ವಿಜಯಕುಮಾರ್ ಖಂಡ್ರೆ (ಬಾಲ್ಕಿ) : ಮಾನ್ಯ ಅಧ್ಯಕ್ಷರೇ, ಪದವಿ ಪೂರ್ವ ವೃತ್ತಿ ಶಿಕ್ಷಣದ ಅಧ್ಯಾಪಕರು ಮತ್ತು ಅಧ್ಯಾಪಕೇತರ ಸಿಬ್ಬಂದಿ ವರ್ಗದ ಬಹಳಷ್ಟು ಜನರು ತಮ್ಮ ನೌಕರಿ ಇನ್ನೂ ಖಾಯಂ ಆಗದೇ ಇರುವುದರಿಂದ ಬಹಳಷ್ಟು ತೊಂದರೆಗೆ ಸಿಲುಕಿಕೊಂಡಿದ್ದಾರೆ. ಇವರಲ್ಲಿ ಅನೇಕ ಜನರು ಹತ್ತು ವರ್ಷಗಳ ಕಾಲ ಸೇವೆಯನ್ನು ಸಲ್ಲಿಸಿದ್ದರೂ ಕೂಡ ಕೇವಲ ಕನ್ಸಾಲಿಡೇಟೆಡ್

ಸ್ಯಾಲರಿಯನ್ನು ತೆಗೆದುಕೊಂಡು ಬಹಳ ಕಷ್ಟದಲ್ಲಿದ್ದಾರೆ. ಖ್ಯಾತ ಶಿಕ್ಷಣ ತಜ್ಞರಾದ ಕೊಠಾರಿ ಆಯೋಗದ ವರದಿಯಂತೆ ಹೊಸ ಶಿಕ್ಷಣ ನೀತಿಯನ್ನು ರಾಷ್ಟ್ರಾದ್ಯಂತ ಪ್ರಾರಂಭಿಸಲಾಯಿತು. ಅದರ ಪ್ರಕಾರ ನಮ್ಮ ಕರ್ನಾಟಕದಲ್ಲಿ 1977-78ನೇ ಸಾಲಿನಲ್ಲಿ ಪದವಿ ಪೂರ್ವ ಶಿಕ್ಷಣ ಮಟ್ಟದಲ್ಲಿ ವೃತ್ತಿ ಶಿಕ್ಷಣವನ್ನು ಪ್ರಾರಂಭಿಸಲಾಯಿತು. ಇದನ್ನು ಪ್ರಾರಂಭ ಮಾಡಿದ ಉದ್ದೇಶ ನಿರುದ್ಯೋಗವನ್ನು ನಿವಾರಣೆ ಮಾಡುವುದು ಮತ್ತು ಸ್ವಯಂ ಉದ್ಯೋಗವನ್ನು ದೊರಕಿಸಿ ಕೊಡುವುದೇ ಆಗಿತ್ತು. ಇದಲ್ಲದೇ ಸಾಮಾನ್ಯ ಶಿಕ್ಷಣದಿಂದ ವೃತ್ತಿ ಶಿಕ್ಷಣಕ್ಕೆ ವಿದ್ಯಾರ್ಥಿಗಳನ್ನು ಪರಿವರ್ತಿಸುವುದೇ ಆಗಿತ್ತು. ಈ ರೀತಿ ಸಾಮಾನ್ಯ ಶಿಕ್ಷಣ ಮತ್ತು ವೃತ್ತಿ ತರಭೇತಿ ಎರಡನ್ನೂ ಕೊಡುವ ಉದ್ದೇಶದಿಂದ ಈ ವೃತ್ತಿಪರ ಶಿಕ್ಷಣವನ್ನು ಪ್ರಾರಂಭಿಸಲಾಯಿತು. ಕರ್ನಾಟಕದಲ್ಲಿ 1977-78ರಲ್ಲಿ ಮೂರು ಕಾಲೇಜುಗಳಲ್ಲಿ ವಿವಿಧ ವೃತ್ತಿ ಶಿಕ್ಷಣದ ಕೋರ್ಸ್‌ಗಳನ್ನು ಪ್ರಾರಂಭಿಸಲಾಯಿತು. ಉದಾಹರಣೆಗಾಗಿ ಎಲೆಕ್ಟ್ರಿಕಲ್ ವೈರಿಂಗ್, ಹೈನುಗಾರಿಕೆ, ತೋಟಗಾರಿಕೆ, ಆಟೋಮೊಬೈಲ್, ಲ್ಯಾಬ್ ಟೆಕ್ನೀಷಿಯನ್, ರೇಷ್ಮೆ ಮತ್ತು ಕಂಪ್ಯೂಟರ್ ಇತ್ಯಾದಿಯಾಗಿ ಪ್ರಾರಂಭಿಸಲಾಯಿತು. ಆ ರೀತಿಯಾಗಿ ಒಟ್ಟು 48 ವೃತ್ತಿ ಶಿಕ್ಷಣದ ಟ್ರೇಡ್‌ಗಳನ್ನು ಇವರು ಕಲಿಸುತ್ತಿದ್ದಾರೆ. 1989ರ ನಂತರ ಸರ್ಕಾರ ವೃತ್ತಿ ಶಿಕ್ಷಣದ ಪ್ರಾಮುಖ್ಯತೆಯನ್ನು ಅರಿತು 8ನೇ ಯೋಜನೆಯಲ್ಲಿ 834 ಕಾಲೇಜುಗಳಲ್ಲಿ ಸುಮಾರು 1324 ವಿವಿಧ ವೃತ್ತಿ ಶಿಕ್ಷಣ ಕೋರ್ಸ್‌ಗಳಲ್ಲಿ ನಡೆಸಲಾಗುತ್ತಿದೆ. ಈ ಕಾಲೇಜುಗಳಲ್ಲಿ ಸೇವೆ ಸಲ್ಲಿಸುತ್ತಿರುವ ಅಧ್ಯಾಪಕರುಗಳು ತಮ್ಮ ಸೇವೆಯನ್ನು ಖಾಯಂ ಮಾಡಬೇಕೆಂದು ಸುಪ್ರೀಂ ಕೋರ್ಟ್‌ಗೆ ಹೋದನಂತರ 1995ನೇ ಇಸವಿಯಲ್ಲಿ ಕೋರ್ಟ್ ಒಂದು ಆದೇಶವನ್ನು ನೀಡಿ ಇದರ ಸೇವೆಯನ್ನು ಖಾಯಂ ಮಾಡಬೇಕೆಂದು ತೀರ್ಪನ್ನು ಕೊಟ್ಟಿತು. ಆ ತೀರ್ಪಿನಲ್ಲಿ 10 ವರ್ಷ ಸೇವೆ ಸಲ್ಲಿಸಿದ ಅಧ್ಯಾಪಕರ ಸೇವೆಯನ್ನು ಖಾಯಂ ಮಾಡಬೇಕೆಂದೂ ಮತ್ತು ಯಾರು ಈ ಅವಧಿಯಲ್ಲಿ 10 ವರ್ಷ ಪೂರ್ಣವಾಗಿಲ್ಲವೋ ಅವರ ಸೇವೆ ಎಂದು 10 ವರ್ಷ ಮುಗಿಯುತ್ತದೋ ಅಂದಿನಿಂದ ಖಾಯಂ ಮಾಡಬೇಕೆಂದು ಹೇಳಲಾಯಿತು.

ಅಧ್ಯಕ್ಷರು : ವಿಜಯ್‌ಕುಮಾರ್ ಖಂಡ್ರೆಯವರೇ, ಶೂನ್ಯ ವೇಳೆಯಲ್ಲಿ ವಿಷಯವನ್ನು ಚೊಕ್ಕವಾಗಿ, ಚಿಕ್ಕದಾಗಿ ಪ್ರಸ್ತಾಪ ಮಾಡಬೇಕೇ ವಿನಃ ಭಾಷಣ ಮಾಡಬಾರದು. ಈ ವರ್ಷ ಬರುವ ಶಾಸಕರ ದಿನದಂದು ಈ ಬಗ್ಗೆ ಬಹುಮಾನಗಳನ್ನು ಕೊಡಲಾಗುವುದು. ಇದರಲ್ಲಿ ಯಾರು ಸದನದಲ್ಲಿ ಶೂನ್ಯ ವೇಳೆಯಲ್ಲಿ ಕಡಿಮೆ ನಿಮಿಷಗಳಲ್ಲಿ ವಿಷಯ ಪ್ರಸ್ತಾಪಿಸಿದ್ದಾರೆ ಮತ್ತು ಯಾರು ಒಳ್ಳೆಯ ಹಾಜರಿಯನ್ನು ಮೇನ್‌ಟೇನ್ ಮಾಡಿಕೊಂಡು ಬಂದಿರುತ್ತಾರೋ ಅವರೆಲ್ಲರಿಗೂ ಬಹುಮಾನಗಳನ್ನು ಕೊಡಲಾಗುವುದು.

ಶ್ರೀ ವಿಜಯಕುಮಾರ್ ಖಂಡ್ರೆ : ಸುಪ್ರೀಂ ಕೋರ್ಟ್ ಜಡ್ಜ್‌ಮೆಂಟ್‌ನಲ್ಲಿ ಏನು ಹೇಳಲಾಗಿದೆಯೆಂದರೆ Those teachers served more than 10 years must be regularised....

1996 ಮತ್ತು 1997ರಲ್ಲಿ ಎರಡೂ ಸದನಗಳಲ್ಲಿ ಈ ಬಗ್ಗೆ ಚರ್ಚೆಯಾದಾಗ ಸಂಬಂಧಪಟ್ಟ ಸಚಿವರು ಇವರ ಸೇವೆಯನ್ನು ಖಾಯಂ ಮಾಡಲಾಗುವುದು ಎಂಬ ಆಶ್ವಾಸನೆಯನ್ನು ಕೊಟ್ಟಿರುತ್ತಾರೆ.

ಶ್ರೀ ಕುಂಬ್ಳೆ ಸುಂದರ್‌ರಾವ್ : ಯಾರು ಸದನಕ್ಕೆ ಹೆಚ್ಚು ದಿನಗಳ ಕಾಲ ಗೈರು ಹಾಜರಾಗಿ ಇರುತ್ತಾರೆ ಅವರಿಗೂ ಕೂಡ ಬಹುಮಾನ ಕೊಡುತ್ತೀರಾ?

ಅಧ್ಯಕ್ಷರು : ಅವರಿಗೂ ಕೊಡೋಣ ಮತ್ತು ಸದನಕ್ಕೆ ಬಂದು ಕೇವಲ ಸಹಿ ಹಾಕಿ ಯಾರು ಹೊರಟುಹೋಗಿರುತ್ತಾರೆ, ಅಂಥವರಿಗೂ ಬಹುಮಾನ ಕೊಡೋಣ.

ಶ್ರೀ ಕುಂಬ್ಳೆ ಸುಂದರ್‌ರಾವ್ : ಸದನದಲ್ಲಿ ಬಂದು ಸುಮ್ಮನೆ ಕುಳಿತು ಹಾಗೆಯೇ ಹೋಗುವವರಿಗೆ ಬಹುಮಾನ ಕೊಡಲಾಗುತ್ತದೆಯೇ?

ಅಧ್ಯಕ್ಷರು : ಅವರಿಗೆ ಕೊಟ್ಟರೆ ಪರವಾಗಿಲ್ಲ. ಅವರಿಗಿಂತ ಸಹಿ ಹಾಕಿ ಹೊರಟು ಹೋಗುತ್ತಾರಲ್ಲಾ ಅವರದ್ದು ಬಹಳ ಮುಖ್ಯ.

ಶ್ರೀ ವಿಜಯಕುಮಾರ್ ಖಂಡ್ರೆ : ವೃತ್ತಿ ಶಿಕ್ಷಣದ ಅಧ್ಯಾಪಕರ ಸೇವೆಯನ್ನು ಮಾಡಲು ಸಚಿವರು ಆಶ್ವಾಸನೆಯನ್ನು ಕೊಟ್ಟಿದ್ದರು ಮತ್ತು ಈ ಕ್ಯಾಬಿನೆಟ್ ಡಿಸಿಷನ್ ಕೂಡ ಆಗಿತ್ತು. ಇಷ್ಟೆಲ್ಲಾ ಆಗಿದ್ದರೂ ಕೂಡ ಕಳೆದ ಎರಡೂ ವರ್ಷಗಳಿಂದ ಈ ಕಾರ್ಯವಾಗದೇ ಪೆಂಡಿಂಗ್‌ನಲ್ಲಿದೆ. ಹಣಕಾಸು ಇಲಾಖೆಯ ಕನ್‌ಕರೆನ್ಸ್ ಸಿಕ್ಕಿಲ್ಲವೆಂದು ಈ ಬಗ್ಗೆ ಫೈಲನ್ನು ತಡೆಹಿಡಿದಿದ್ದಾರೆ.

ಅಧ್ಯಕ್ಷರು : ಈ ವಿಷಯಕ್ಕೆ ಸಂಬಂಧಪಟ್ಟ ಸಚಿವರು ಬಹಳ ಅನುಭವವುಳ್ಳವರಾಗಿದ್ದಾರೆ. ನೀವು ವಿಷಯವನ್ನು ಬೇಗ ಮುಗಿಸಿ.

ಶ್ರೀ ವಿಜಯಕುಮಾರ್ ಖಂಡ್ರೆ : ಆದುದರಿಂದ ಈ ಅಧ್ಯಾಪಕರನ್ನು ಸಾಧ್ಯವಾದಷ್ಟು ಬೇಗ ಖಾಯಂಗೊಳಿಸಿ ಸಮಸ್ಯೆಯನ್ನು ಬಗೆಹರಿಸಬೇಕೆಂದು ಸಂಬಂಧಪಟ್ಟ ಸಚಿವರಿಗೆ ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ.

ಶ್ರೀ ಎಂ.ಪಿ. ಪ್ರಕಾಶ್ : ಮಾನ್ಯ ಅಧ್ಯಕ್ಷರೇ, ಅವರು ಈಗಾಗಲೇ ಮಾತನಾಡುತ್ತಾ ಹಣಕಾಸು ಇಲಾಖೆಯಲ್ಲಿ ಈ ಬಗ್ಗೆ ಪ್ರಸ್ತಾವನೆ ಇದೆ ಎಂದು ಹೇಳಿದ್ದಾರೆ. ಇದರ ಬಗ್ಗೆ ಈಗಾಗಲೇ ಸರ್ಕಾರ ಗಮನಕೊಟ್ಟಿದೆ. ಹಣಕಾಸು ಇಲಾಖೆ ಪ್ರಸ್ತಾವನೆ ಆದಮೇಲೆ ಖಂಡಿತವಾಗಿಯೂ ಇದರ ಬಗ್ಗೆ ನಿರ್ಧಾರ ತೆಗೆದುಕೊಳ್ಳಲಾಗುವುದು.

ಅಗ್ನಿಶಾಮಕ ಇಲಾಖೆಯಲ್ಲಿ ಕೆಲಸ ಮಾಡತಕ್ಕ ಅಧಿಕಾರಿಗಳಿಗೆ ಭಡ್ತಿ

+ ಶ್ರೀ ಯು.ಆರ್. ಸಭಾಪತಿ (ಉಡುಪಿ) : ಮಾನ್ಯ ಅಧ್ಯಕ್ಷರೇ, ಕರ್ನಾಟಕ ಪೋಲಿಸ್ ಇಲಾಖೆಯ ಅಂಗವಾಗಿರತಕ್ಕಂಥ ಅಗ್ನಿಶಾಮಕ ಇಲಾಖೆ ಏನಿದೆ ಇದನ್ನು 1965ನೇ ಇಸವಿಯಲ್ಲಿಯೇ ಬೇರೆ ಇಲಾಖೆಯಾಗಿ ಬೇರ್ಪಡಿಸಿ 1971ರಲ್ಲಿ ಇದಕ್ಕೆ ಸಂಬಂಧಪಟ್ಟ ವೃಂದ ಮತ್ತು ನೇಮಕಾತಿ ನಿಯಮಾವಳಿಗಳನ್ನು ಮಾಡಿದ್ದಾರೆ. ಸರ್ಕಾರದ ಕಾನೂನಿನಂತೆ ಈ ವೃಂದ ಮತ್ತು ನೇಮಕಾತಿ ನಿಯಮಾವಳಿಗಳನ್ನು ಪ್ರತಿ 5 ವರ್ಷಕ್ಕೊಮ್ಮೆ ಪರಿಷ್ಕರಿಸಬೇಕು. ಆದರೆ ಅಂದು 1965ನೇ ಇಸವಿಯಲ್ಲಿ